# ಕ್ರಿಯಾ ಪುಸ್ತಕಗಳೇ ಅಥವಾ ಆಟದ ಪುಸ್ತಕಗಳೇ – ರಾಜಸ್ತಾನ ಸರಕಾರಿ ಶಾಲೆಗಳ ಕ್ರಿಯಾಪುಸ್ತಕ ಅಭಿವೃದ್ಧಿಯ ಅನುಭವ

ಆಂಚಲ್ ಚೋಮಲ್

ಕಲಿಕಾ ಖಾತರಿ ಯೋಜನೆಯಡಿ ರಾಜಸ್ತಾನದ 1ರಿಂದ 5ರ ವರೆಗಿನ ಸರಕಾರಿ ಶಾಲೆಗಳ ಗಣಿತ, ಪರಿಸರ ವಿಜ್ಞಾನ, ಭಾಷಾ ಕಲಿಕೆಗಳ ಕುರಿತ ಮೌಲ್ಯಮಾಪನವನ್ನು ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನ ಕೈಗೊಂಡಿತ್ತು. ಪ್ರಾಥಮಿಕ ಓದು, ಬರಹ, ಗಣಿತ ಕ್ರಿಯೆ ಮತ್ತು ಪರಿಸರದ ಜತೆಗಿನ ಸರಳ ಸಂಪರ್ಕ ಕುರಿತ ಕಲಿಕಾ ಮಟ್ಟ ಅತ್ಯಂತ ಕೆಳಗಿತ್ತು ಎನ್ನುವುದನ್ನು ಈ ಅಧ್ಯಯನ ತೋರಿಸಿಕೊಟ್ಟಿತು. ಇದರಿಂದಾಗಿ ಅಧ್ಯಾಪಕರು ಸ್ವರ್ಧಾತ್ಮಕತೆಯ ಬೇಡಿಕೆಯನ್ನು ಒಂದೇ ಸಮನೆ ಮುಂದಿಡಲು ಆರಂಭಿಸಿದರು. 'ನೈಜ ಸ್ವರ್ಧಾತ್ಮಕತೆ ಕಲಿಸುವುದಕ್ಕೆ ಸಹಾಯ ಮಾಡಿ' ಎಂದು ಮೊರೆಯಿಟ್ಟರು. ವಿಷಯಗಳನ್ನು ಕಲಿಸುವುದಕ್ಕೆ ಇದ್ದ ಮುಖ್ಯ ಆಕರಗಳೆಂದರೆ ಅಧ್ಯಾಪಕ ಕೇಂದ್ರಿತ ಪಠ್ಯಪುಸ್ತಕಗಳೇ ಆಗಿದ್ದುವು. ಪಠ್ಯಪುಸ್ತಕಗಳಿಗೆ ಪೂರಕವಾಗಿ ಇನ್ನೇನಾದರೂ ಬೇಕು ಎಂದು ಅಧ್ಯಾಪಕರಿಗೆ ಅನ್ನಿಸತೊಡಗಿತ್ತು. ಪಾಠಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವುದಕ್ಕಾಗಿ ಬಹುಮುಖಿ ನೆಲೆಗಳಿಗೆ ತೆರೆದುಕೊಳ್ಳಬೇಕಾಗಿತ್ತು. ಕೇವಲ ಶಿಕ್ಷಕ ತರಬೇತಿಯೊಂದೇ ಈ ಉದ್ದೇಶ ನೆರವೇರಿಸಲಾರದು ಎಂದೂ ಅವರಿಗೆ ಅನ್ನಿಸಿತ್ತು. ಹಾಗಾಗಿ ಇದು ಮುಂದೆ ಕ್ರಿಯಾಪುಸ್ತಕಗಳ ಅಭಿವೃದ್ಧಿಗೆ ಹಾದಿಮಾಡಿಕೊಟ್ಟಿತು.

ರಾಜ್ಯ ಯೋಜನಾ ನಿರ್ದೇಶಕರ ಆಹ್ವಾನದ ಮೇರೆಗೆ ಅಜೀಮ್ ಪ್ರೇಮ್‌ಜೀ ಪ್ರತಿಷ್ಠಾನದವರು (ದಿಗಂತರ್ ಮತ್ತು ವಿದ್ಯಾಭವನ್ ಸೊಸೈಟಿ ಸಹಯೋಗದೊಂದಿಗೆ) ರಾಜಸ್ಥಾನಕ್ಕಾಗಿ ಕ್ರಿಯಾಪುಸ್ತಕಗಳನ್ನು ಅಭಿವೃದ್ಧಿಪಡಿಸಿದರು. 78ಸಾವಿರ ಶಾಲೆಗಳ 1ರಿಂದ8ರ ವರೆಗಿನ ತರಗತಿಗಳ 1.5 ಕೋಟಿ ಮಕ್ಕಳನ್ನು ಒಳಗೊಂಡ ಯೋಜನೆ. ಒಂದು ತಂಡವನ್ನು ಜೈಪುರ್‌ನಲ್ಲಿ (ದಿಗಂತರ್ ಜತೆ ಸೇರಿ) ರಚಿಸಲಾಯಿತು. ಇನ್ನೊಂದು ತಂಡವನ್ನು (ವಿದ್ಯಾಭವನ್ ಸೊಸೈಟಿ ಜತೆ ಸೇರಿ) ಉದಯ್‌ಪುರ್‌ನಲ್ಲಿ ಕಟ್ಟಲಾಯಿತು. ಎರಡೂ ತಂಡಗಳ ಅವಧಿ 6 ರಿಂದ 8 ತಿಂಗಳು ಮಾತ್ರ. 1ರಿಂದ 5ನೆಯ ತರಗತಿಯ ವರೆಗಿನ ಕ್ರಿಯಾಪುಸ್ತಕಗಳು ಹಿಂದಿ, ಗಣಿತ, ಪರಿಸರ ಅಧ್ಯಯನ ವಿಷಯಗಳನ್ನು ಒಳಗೊಂಡಿದ್ದರೆ, 6ರಿಂದ 8ನೆಯ ತರಗತಿಯ ವರೆಗಿನ ಕ್ರಿಯಾಪುಸ್ತಕಗಳು ಹಿಂದಿ, ಇಂಗ್ಲಿಷ್, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ– ಒಳಗೊಂಡು ಅಭಿವೃದ್ಧಿಪಡಿಸಲಾಯಿತು. ಯೋಜನೆಯ ತಂಡದಲ್ಲಿದ್ದವರು ಪ್ರಸಕ್ತ ಪಠ್ಯಪುಸ್ತಕಗಳಲ್ಲಿರುವ ವಿಷಯಗಳನ್ನು ಸಾಮೂಹಿಕವಾಗಿ ಪರಾಮರ್ಶಿಸಿದರು. ಈ ಕೆಳಗಿನ ವಿಷಯಗಳು ಕಾಳಜಿಯ ವಿಷಯಗಳಾಗಿ ಹೊರಹೊಮ್ಮಿದವು.

ಬಳಸಿದ ಭಾಷೆ: ಪಠ್ಯಪುಸ್ತಕಗಳಲ್ಲಿ ಬಳಸಿದ ಸಂಕ್ಷಿಪ್ತತೆ ಮತ್ತು ವಾಚಾಳಿತನ ಗಮನಾರ್ಹ. ಇದನ್ನು ಕ್ರಿಯಾಪುಸ್ತಕಗಳಲ್ಲಿ ಪರಿಹರಿಸಲಾಯಿತು. ಅದಕ್ಕಾಗಿ ಸ್ವಷ್ಟ ಮತ್ತು ಗೊಂದಲರಹಿತ ಸೂಚನೆಗಳನ್ನು ನೀಡಲಾಯಿತು. ಕಲಿಯುವವರಿಗೆ ಓದಿ ಅರ್ಥಮಾಡಿಕೊಳ್ಳುವಂತೆ ಸರಳ ಪದಗಳಲ್ಲೇ ನಿರೂಪಣೆ. ಸ್ವತಂತ್ರವಾಗಿ ಅಥವಾ ಅಧ್ಯಾಪಕರ ಮಾರ್ಗದರ್ಶನದೊಂದಿಗೆ ಚಟುವಟಿಕೆ ನಡೆಸುವಂತೆ ಮಾಡಲಾಯಿತು.

ವಿನ್ಯಾಸ: ಅಕ್ಷರ ಗಾತ್ರ, ಬಳಸಿದ ಬಣ್ಣ, ಒಟ್ಟಾರೆ ವಿನ್ಯಾಸ ಮತ್ತು ಮುದ್ರಣ ಗುಣಮಟ್ಟ– ಇವೆಲ್ಲ ಪಠ್ಯಪುಸ್ತಕಗಳಲ್ಲಿ ಉತ್ತಮಗೊಳಿಸಬೇಕಾದ ಅಂಶಗಳೆಂದು ಭಾವಿಸಲಾಯಿತು. ಹೀಗೆ ಕ್ರಿಯಾಪುಸ್ತಕಗಳ ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಈ ಎಲ್ಲ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಾಯಿತು. ಮಗು ಅನಾಯಾಸವಾಗಿ ಪುಸ್ತಕ ಕೈಗೆತ್ತಿಕೊಳ್ಳುವಂತೆ ಮಾಡುವುದೇ ಇದರ ಹಿಂದಿನ ಉದ್ದೇಶ.

ಮಾಹಿತಿಯ ಆಯ್ಕೆ: ವಯೋಮಾನಕ್ಕೆ ಅನುಗುಣವಾಗಿ ಮಾಹಿತಿಗಳ ಆಯ್ಕೆ ಮತ್ತು ಪ್ರಸ್ತುತ ಪಡಿಸುವುದನ್ನು ಪಠ್ಯಪುಸ್ತಕಗಳಲ್ಲಿ ಅಸಮರ್ಪಕವಾಗಿ ನಿರ್ವಹಿಸಲಾಗಿದೆ. ಅನೇಕ ಬಾರಿ ಒಂದೇ ಪ್ಯಾರಾಗ್ರಾಫ್‌ನಲ್ಲಿ ಅನೇಕ ಪರಿಕಲ್ಪನೆಗಳನ್ನು ಪರಿಚಯಿಸಲಾಗುತ್ತಿದ್ದು ಅವುಗಳ ಅರ್ಥ ಏನು ಎನ್ನುವದರ ಬಗೆಗೆ ಅತ್ಯಲ್ಪ ವಿವರಗಳನ್ನಷ್ಟೇ ನೀಡಲಾಗಿದೆ. ಕ್ರಿಯಾಪುಸ್ತಕಗಳಲ್ಲಿರುವ ಪರಿಕಲ್ಪನೆಗಳನ್ನು ವಯೋಮಾನಕ್ಕೆ ಅನುಗುಣವಾಗಿ ಆದ್ಯತೆಯ ಆಧಾರದಲ್ಲಿ ನೀಡಬೇಕಾಗುತ್ತದೆ. ಕಲಿಕಾಪೂರ್ವ ಮತ್ತು ವಿವಿಧ ತರಗತಿಗಳಲ್ಲಿ ಅದಕ್ಕೆ ಸಂಬಂಧಿಸಿದ ಪರಿಕಲ್ಪನಾತ್ಮಕ ಕೊಂಡಿಗಳು ಇರಬೇಕಾಗುತ್ತದೆ. ಹಾಗೆ ಮಾಡುವುದರಿಂದ ಕೆಲವು ಮುಖ್ಯ ಮತ್ತು ಅಗತ್ಯದ ಪರಿಕಲ್ಪನೆಗಳನ್ನು ಇನ್ನಷ್ಟು ಆಳವಾಗಿ ನಿರ್ವಹಿಸುವುದು ಸಾಧ್ಯವಾಗುತ್ತದೆ. ಪಠ್ಯಪುಸ್ತಕಗಳಲ್ಲಿ ಕಾಣಿಸಿಕೊಳ್ಳುವ ಪರಿಕಲ್ಪನಾ ಅಂತರವನ್ನು ನಿವಾರಿಸುವುದಕ್ಕಾಗಿ ಸಂದರ್ಭಾನುಸಾರ ಪೂರಕ ವಾಚನ ಸಾಮಗ್ರಿಗಳನ್ನು ಪೂರೈಸುವುದು ಮುಖ್ಯ.

ನಿಖರವಲ್ಲದ ಮಾಹಿತಿಯನ್ನು ತೊಡೆದುಹಾಕುವುದು: ಅಪಾಯಕಾರಿ ಮಟ್ಟದಲ್ಲಿ ಅನೇಕ ವಾಸ್ತವ ದೂರವಾದ ಮಾಹಿತಿಗಳೂ ಇವೆ. ಕ್ರಿಯಾಪುಸ್ತಕಗಳಲ್ಲಿ ಅಳವಡಿಸಲಾದ ಮಾಹಿತಿ ಮೂಲಗಳನ್ನು ಪರಿಶೀಲಿಸುವ, ಮರುಪರಿಶೀಲಿಸುವ ಮೂಲಕ ಈ ಸಮಸ್ಯೆಗಳನ್ನು ನಿವಾರಿಸಬಹುದಾಗಿದೆ. ನಿಜವಾಗಿಯೂ ಇಡಿಯ ಅಭ್ಯಾಸವು ಯಾವುದೇ ಬೋಧನ – ಕಲಿಕಾ ಸಾಮಗ್ರಿಗಳನ್ನು (ಆಕರ) ತಯಾರಿಸುವ ಸಂದರ್ಭದಲ್ಲಿ ಅನಿವಾರ್ಯ.

ವಸ್ತು ವಿಚಾರಗಳ ಕ್ರಮಬದ್ಧಗೊಳಿಸುವಿಕೆ ಮತ್ತು ವ್ಯವಸ್ಥಿತಗೊಳಿಸುವಿಕೆ: ಪ್ರತೀ ಪುಸ್ತಕದಲ್ಲೂ, ಪ್ರತೀ ಕಲಿಕಾ ಘಟ್ಟದಲ್ಲೂ ಪರಿಕಲ್ಪನಾ ನಕ್ಷೆಯ ಗೈರು ಹಾಜರಿ ಎದ್ದುಕಾಣಿಸಿದೆ. ಅಧ್ಯಾಯಗಳ ನಡುವಣ ಕೊಂಡಿಗಳು ನಿಜವಾಗಿಯೂ

ಪೂರ್ತಿ ಕಣ್ಮರೆಯಾಗಿವೆ. ಅದೇ ರೀತಿ ಪರಿಕಲ್ಪನೆಯ ನಡುವಣ ಕೊಂಡಿಗಳು ಕಳಚಿಕೊಂಡಿವೆ. ಅಂತರ್‌ಶಿಸ್ತೀಯ ಸೇತುಗಳು ದೂರದ ಅಳುವಾಗಿಯಷ್ಟೇ ಉಳಿದುಕೊಂಡಿದೆ. ಹಾಗಾಗಿ ಕ್ರಿಯಾಪುಸ್ತಕಗಳನ್ನು ಮಕ್ಕಳ ಹಿಮ್ಮುಖೀ–ಮುಮ್ಮುಖೀ ಕಲಿಕೆಗೆ ಅನುಕೂಲ ಆಗುವಂತೆ ರಚಿಸಲಾಗಿದೆ. ಪರಿಕಲ್ಪನೆ, ವಸ್ತುವಿಷಯ ಮತ್ತು ವಿವಿಧ ಘಟ್ಟಗಳಲ್ಲಿ ಹಿಮ್ಮುಖೀ–ಮುಮ್ಮುಖೀ ಕಲಿಕೆಗೆ ಅನುಕೂಲ ಆಗುವಂತೆ ವಿನ್ಯಾಸಗೊಳಿಸಲಾಗಿದೆ. ನಿರ್ದಿಷ್ಟ ಕನಿಷ್ಠ ವಿಷಯಗಳನ್ನು ಹೊರತುಪಡಿಸಿ ಹೆಚ್ಚಿನದ್ದೇನನ್ನೂ ಮಗುವಿನಿಂದ ನಿರೀಕ್ಷಿಸದೇ ಮುಂದುವರೆಯುಂತೆ ಕ್ರಿಯಾಪುಸ್ತಕಗಳನ್ನು ರಚಿಸಲಾಗಿದೆ.

ದೃಶ್ಯಾತ್ಮಕ ವರ್ಚಸ್ಸು: ಹಿಂಸೆ ಮತ್ತು ಭೂಕಂಪನದಂತಹ ಅಪರಿಚಿತ ಪರಿಕಲ್ಪನೆಗಳನ್ನು ಪರಿಚಯಿಸುವಾಗ ಸ್ಪಷ್ಟ ಅನುಭವ ವಿದ್ಯಾರ್ಥಿಗೆ ಸಿಗುವಂತೆ ನೋಡಬೇಕೆನ್ನುವುದು ಮುಖ್ಯ. ಯಾಕೆಂದರೆ ಪ್ರತಿ ಮಗುವಿಗೂ ಈ ಪರಿಕಲ್ಪನೆ ತಿಳಿದಿರಬೇಕೆಂದೇನೂ ಇಲ್ಲ. ಅದೇ ರೀತಿ ಇಲ್ಲಿನ ಚಿತ್ರಗಳು ಆಕರ್ಷಕವಾಗಿ ಮತ್ತು ಅರ್ಥಪೂರ್ಣವಾಗಿ ಇರಬೇಕಾಗುತ್ತದೆ. ಇಲ್ಲಿ ಅಭಿವೃದ್ಧಿಪಡಿಸಿದ ಕ್ರಿಯಾಪುಸ್ತಕಗಳಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.

ಕಲಿಯುವವರ ಸಂದರ್ಭಕ್ಕೆ ಅನುಗುಣವಾಗಿ ವಸ್ತುವಿಚಾರಗಳ ಸಂದರ್ಭೀಕರಣ: ಸಂದರ್ಭೀಕರಣದ ಭಾಗವಾಗಿ ಜನಪದ ಮತ್ತು ಪರಿಚಿತ ಗೀತೆಗಳನ್ನು ಬಳಸಲಾಗಿದೆ. ಇವೆಲ್ಲ ಸ್ಥಳೀಯ ಜೀವಜಾಲಗಳ ಈ ಕ್ರಿಯಾ ಪುಸ್ತಕಗಳು ಮಗುವನ್ನು ನಿರ್ದೇಶಿಸಿ ಇರುವುದರಿಂದ ಸ್ವತಂತ್ರ, ವರಿಷ್ಠ ಮತ್ತು ಗುಂಪುಕಲಿಕೆ ಆಯಾ ಅಧ್ಯಾಪಕರಿಗೆ ಸ್ವತಂತ್ರವಾಗಿರುತ್ತವೆ.

ಇದರ ಅರ್ಥ ಇಲ್ಲಿ ಅಧ್ಯಾಪಕರು ಹೊರತಾಗಿದ್ದಾರೆ ಎಂದಲ್ಲ. ಇಲ್ಲಿ ಅಧ್ಯಾಪಕರಿಗೆ ಕ್ರಿಯಾಪುಸ್ತಕ ಬಳಸುವುದಕ್ಕಾಗಿ ಸ್ಪಷ್ಟ, ಗೊಂದಲರಹಿತ, ಸುಲಭ ಅನುಸರಣೀಯ ಸೂಚನೆಗಳನ್ನು ನೀಡಲಾಗಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಹಕಲಿಕೆಗಾರರು ಎಂಬ ಮಾನದಂಡದಲ್ಲೇ ಇಲ್ಲಿನ ಸಂಪೂರ್ಣ ಆಕರಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹೊರತಾಗಿ ಒಬ್ಬರು ಇನ್ನೊಬ್ಬರಿಗೆ ಬೋಧಿಸುತ್ತಾರೆ ಎಂಬ ನೆಲೆಯಲ್ಲಿ ಅಲ್ಲ.